159ಡಿಇ
(69)

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಫ್.ಹೆಚ್.ಜಕ್ಕಪ್ಪನವರ ಇವರ ನಿಯಮ-330ರ ಅಡಿಯಲ್ಲಿ ಕೋರಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ**

**ಪ್ರಶ್ನೆ:**

ರಾಜ್ಯದಲ್ಲಿನ ಕಲ್ಲುಗಣಿಗಾರಿಕೆಯಲ್ಲಿ ಅನಧಿಕೃತವಾಗಿ ಸಾದಾ ಕಟ್ಟಡಕಲ್ಲು ತೆಗೆದು ಸಾಗಾಣಿಕೆ ಮಾಡಿದ್ದಕ್ಕಾಗಿ **MMDR 1957** ಕಾಯ್ದೆ ಪ್ರಕಾರ 1.0 ಹೆಕ್ಟೇರ್ ಪ್ರದೇಶಕ್ಕೆ ರೂ **5,00,000/-** ಐದು ಲಕ್ಷದ ವರೆಗಿನ ದಂಡ ವಿಧಿಸಲು ಅವಕಾಶವಿತ್ತು.

ರಾಜ್ಯದಲ್ಲಿನ ಕಲ್ಲು ಗಣಿಗಳಲ್ಲಿ ಸಾದಾ ಕಟ್ಟಡ ಕಲ್ಲು ಹೊರತೆಗೆವಿಕೆಯನ್ನು ನಿಯಂತ್ರಣ ಮಾಡಲು ಸರ್ಕಾರ **2023** ರಲ್ಲಿ ಡ್ರೋನ್ ಮೂಲಕ ಸರ್ವೆ ಮಾಡಲು ನಿರ್ಧರಿಸಿತು ನಂತರ ಈ ಪ್ರಕ್ರಿಯೆಯು ವಿಫಲವಾಗಿದ್ದರಿಂದ ಮತ್ತೆ **2024** ರಲ್ಲಿ ರಾಜ್ಯದಲ್ಲಿನ ಕಲ್ಲು ಗಣಿಗಳನ್ನು ಪುನಃ ಡ್ರೋನ್ ಮೂಲಕ ಸರ್ವೆ ಮಾಡಲು ನಿರ್ಧರಿಸಲಾಯಿತು ಈಗ ಸರ್ಕಾರವು ಒಂದು ಬಾರಿಯ ತೀರ್ಮಾನ **(OTS)** ಯೋಜನೆಯ ಮೂಲಕ ಈ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ **2006-07** ಇಸವಿಯಿಂದ ಜಾರಿಗೆ ಬರುವಂತೆ ಪೂರ್ವಾನ್ವಯವಾಗಿ **(Retrospective)** ದಂಡ ವಿಧಿಸಲು ನಿರ್ಧರಿಸಿದೆ.

ಯಾವುದೇ ಒಂದು ಕಾನೂನು ಅಥವಾ ನಿಯಮಾವಳಿಗಳನ್ನು ಪೂರ್ವನ್ವಯವಾಗಿ ಜಾರಿಗಳಿಸಲು ಅವಕಾಶ ಇಲ್ಲವೆಂದು ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆದೇಶಿಸಿದೆ.

ಹೀಗಿದ್ದರೂ ಕೂಡ ಸರ್ಕಾರವು ಕಾನೂನು ಹಾಗೂ ನಿಯಮಗಳನ್ನು ಪೂರ್ವನ್ವಯವಾಗಿ ಜಾರಿಗೊಳಿಸದೇ ಈ ವರ್ಷದಿಂದ **(Prospective)** ಆಗಿ ಜಾರಿಗೊಳಿಸುವುದು ಸೂಕ್ತ. ಈ ಕುರಿತು ಅಂತಿಮ ಆದೇಶ ಮಾಡುವ ಮೊದಲು ರಾಜ್ಯದ ಗಣಿ ಮಾಲೀಕರ ಸಭೆಯನ್ನು ಕರೆದು ನಿರ್ಣಯ ತೆಗೆದುಕೊಳ್ಳುವಂತೆ ಗಣಿ ಹಾಗೂ ಭೂವಿಜ್ಞಾನ ಇಲಾಖೆ ಸಚಿವರ ಗಮನ ಸೆಳೆದಿರುತ್ತಾರೆ.

**ಉತ್ತರ:**

ಗಣಿ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ, 1957 (ಎಂ.ಎಂ (ಡಿ & ಆರ್) ಸೆಕ್ಷನ್-4(1) & ಸೆಕ್ಷನ್- 4(1-A)ರ ಉಲ್ಲಂಘನೆಗಾಗಿ ಸಕ್ಷಮ ಪ್ರಾಧಿಕಾರಿಯು ದಾಖಲಿಸಿರುವ ಮೊಕದ್ದಮೆಗಳ / ಖಾಸಗಿ ದೂರುಗಳ ಪ್ರಕರಣಗಳಲ್ಲಿ ಅಕ್ರಮ ಗಣಿಚಟುವಟಿಕೆ ನಡೆಸಿರುವುದು ಸಾಬೀತಾಗಿ **Convict** ಆದಲ್ಲಿ ಮಾನ್ಯ ನ್ಯಾಯಾಲಯವು ಸೆಕ್ಷನ್-21(1) & (2) ರಡಿ ಸಕ್ಷಮ ನ್ಯಾಯಾಲಯವು ಶಿಕ್ಷೆಯನ್ನು ವಿಧಿಸಬಹುದಾಗಿದೆ.

**Section-21(1) Whoever contravenes the provisions of sub-section (1) or sub-section (1-A) of section 4 shall be punishable with imprisonment for a term which may extend to five years and with fine which may extend to five lakh rupees per hectare of the area.**

**Section-21(2) Any rule made under any provision of this Act may provide that any contravention thereof shall be punishable with imprisonment for a term which may extend to two years or with fine which may extend to five lakh rupees, or with both, and in the case of a continuing contravention, with additional fine which may extend to fifty thousand rupees for every day during which such contravention continues after conviction for the first such contravention.**

ಸೆಕ್ಷನ್ – 21(1) & (2) ರಡಿ ಪ್ರತಿ ಹೆಕ್ಟೇರ್ ಪ್ರದೇಶಕ್ಕೆ ರೂ.5,00,000/- ವಿಧಿಸುವುದು ಸದರಿ ವ್ಯಕ್ತಿಯು ಅಕ್ರಮ ಗಣಿಗಾರಿಕೆ ನಡೆಸಿರುವ ಕೃತ್ಯಕ್ಕೆ ಮಾತ್ರ ದಂಡವಾಗಿದ್ದು, ಸೆಕ್ಷನ್ – 21(5) ಪ್ರಕಾರ ಅಕ್ರಮವಾಗಿ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವ ಖನಿಜದ ಪ್ರಮಾಣಕ್ಕೆ ತಗಲುವ ದರ, ಬಾಡಿಗೆ, ತೆರಿಗೆ/ ರಾಜಧನವನ್ನು ಸಂಗ್ರಹಿಸಬೇಕಾಗಿದೆ.

ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮಗಳು-1994ರ ನಿಯಮ-36 ರಂತೆ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ದಾರರು ಗುತ್ತಿಗೆ / ಲೈಸೆನ್ಸ್ ಪ್ರದೇಶದಲ್ಲಿ ಉತ್ಪಾದಿಸಿ ಸಾಗಾಣಿಕೆ ಮಾಡುವ ಉಪಖನಿಜದ ಪ್ರಮಾಣಕ್ಕೆ ಮುಂಗಡವಾಗಿ ರಾಜಧನ ಮತ್ತು ಅನ್ವಯಿಕ ಶುಲ್ಕಗಳನ್ನು ಪಾವತಿಸಿ ಖನಿಜ ರವಾನೆ ಪರವಾನಿಗೆ ಪಡೆದು ಸಾಗಾಣಿಕೆ ಮಾಡಬೇಕಾಗಿದೆ. ಖನಿಜ ರವಾನೆ ಪರವಾನಿಗೆ ಪಡೆಯದೆ ಸಾಗಾಣಿಕೆ ಮಾಡುವ ಉಪಖನಿಜದ ಪ್ರಮಾಣಕ್ಕೆ ನಿಯಮ-44(4) ರಂತೆ 05 ಪಟ್ಟು ರಾಜಧನದ ದಂಡವನ್ನು ಸಂಗ್ರಹಿಸಬೇಕಾಗಿದೆ.

ಆದಾಗ್ಯೂ, ಕಟ್ಟಡ ಕಲ್ಲುಗಣಿ ಗುತ್ತಿಗೆದಾರರು ಕಟ್ಟಡ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ಪ್ರದೇಶಗಳಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಕಟ್ಟಡ ಕಲ್ಲು ತೆಗೆದು ರಾಜಧನ ಪಾವತಿಸದೇ ಸಾಗಾಣಿಕೆ ಮಾಡಿರುವ ಹಾಗೂ ಒತ್ತುವರಿ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವ ಪ್ರಮಾಣದ ಉಲ್ಲಂಘನೆಗಳನ್ನು ಇತ್ಯರ್ಥಪಡಿಸಲು ಒಂದು ಬಾರಿಯ ತೀರುವಳಿ (OTS) ಯೋಜನೆಯನ್ನು ಪರಿಚಯಿಸಲು ಈ ಕೆಳಕಂಡಂತೆ ಕ್ರಮಕೈಗೊಳ್ಳಲಾಗಿದೆ.

ರಾಜ್ಯದಲ್ಲಿ ಮಂಜೂರು ಮಾಡಿರುವ ಕಟ್ಟಡ ಕಲ್ಲುಗಣಿಗುತ್ತಿಗೆ ಪ್ರದೇಶಗಳನ್ನು ಕರ್ನಾಟಕ ರಾಜ್ಯ ದೂರ ಸಂವೇದಿ ಕೇಂದ್ರ (KSRSAC) ರವರಿಂದ ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ನಡೆಸಿ, ಗುತ್ತಿಗೆ ಪ್ರದೇಶದ ಪ್ರಸ್ತುತ ಭೂಮಟ್ಟದ ಆಳತೆಗಳನ್ನು ಘನೀಕರಿಸಿ, ಕಲ್ಲುಗಣಿ ಗುತ್ತಿಗೆ ಪ್ರದೇಶಗಳಲ್ಲಿ ಹಾಗೂ ಗುತ್ತಿಗೆ ಪ್ರದೇಶವನ್ನು ಒತ್ತುವರಿ ಮಾಡಿ ತೆಗೆದು ಸಾಗಾಣಿಕೆ ಮಾಡಿರುವ ಉಪಖನಿಜದ ಪ್ರಮಾಣವನ್ನು ಅಂದಾಜಿಸಿ 2024-25 ನೇ ಸಾಲಿನಲ್ಲಿ ವರದಿ ಪಡೆಯಲಾಗಿದೆ.

**Carto-sat Image 2006/2007** ನೇ ಸಾಲಿನ ಕಲ್ಲುಗಣಿ ಗುತ್ತಿಗೆ ಪ್ರದೇಶದ ಭೂಮಟ್ಟವನ್ನು ಪರಿಗಣಿಸಿ ಕಟ್ಟಡ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ಪ್ರದೇಶಗಳಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಕಟ್ಟಡ ಕಲ್ಲು ತೆಗೆದು ರಾಜಧನ ಪಾವತಿಸದೇ ಸಾಗಾಣಿಕೆ ಮಾಡಿರುವ ಹಾಗೂ ಒತ್ತುವರಿ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವ ಪ್ರಮಾಣವನ್ನು ಅಂದಾಜಿಸಲಾಗಿದೆ.

ಡ್ರೋಣ್/ ಡಿ.ಜಿ.ಪಿ.ಎಸ್ ಸರ್ವೆ ನಡೆಸಿ ಅಂದಾಜಿಸಿರುವ ಪ್ರಮಾಣಕ್ಕೆ ಅನುಗುಣವಾಗಿ ದಂಡವನ್ನು ಸಂಗ್ರಹಿಸಲು ಸರ್ಕಾರವು ಕರ್ನಾಟಕ ಉಪ ಖನಿಜ ರಿಯಾಯಿತಿ (KMMC) ನಿಯಮಗಳು, 1994 ರ ತಿದ್ದುಪಡಿ ತಂದು, ನಿಯಮ 44A ಅಡಿಯಲ್ಲಿ ಒಂದು ಬಾರಿಯ ತೀರುವಳಿ (OTS) ಯೋಜನೆಯನ್ನು ಜಾರಿಗೆ ತರಲಾಗಿದೆ.

ಸದರಿ ನಿಯಮಗಳ ತಿದ್ದುಪಡಿಯಂತೆ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ, ಬೆಂಗಳೂರು (KSRSAC) ವತಿಯಿಂದ ಸಲ್ಲಿಸಿರುವ ವರದಿಯನುಸಾರ ಕಟ್ಟಡ ಕಲ್ಲುಗಣಿ ಗುತ್ತಿಗೆ / ಲೈಸೆನ್ಸ್ ಪ್ರದೇಶಗಳಲ್ಲಿ ಸಂಚಿತ ಆಡಿಟ್ ಪ್ರಮಾಣಕ್ಕಿಂತ ಅಧಿಕವಾಗಿ ಕಟ್ಟಡ ಕಲ್ಲು ತೆಗೆದು ರಾಜಧನ ಪಾವತಿಸದೇ ಸಾಗಾಣಿಕೆ ಮಾಡಿರುವ ಹಾಗೂ ಒತ್ತುವರಿ ಗಣಿಗಾರಿಕೆ ನಡೆಸಿ ಸಾಗಾಣಿಕೆ ಮಾಡಿರುವ ಪ್ರಮಾಣಕ್ಕೆ ದಂಡವನ್ನು ಒಂದು ಬಾರಿಯ ತೀರುವಳಿ (One Time Settlement) ಮೂಲಕ ಪಾವತಿಸಲು ಕಾಲಮಿತಿ ನಿಗಧಿಪಡಿಸಿ ಪಾವತಿಸಿಕೊಳ್ಳಲು ದಿನಾಂಕ: 26-02-2026 ರಲ್ಲಿ ಮಾರ್ಗಸೂಚಿಗಳನ್ನು ರಾಜ್ಯ ಪತ್ರದಲ್ಲಿ ಪ್ರಕಟವಾದ ದಿನಾಂಕ: 09-03-2026 ರಿಂದ ಜಾರಿಗೆ ಬರುವಂತೆ ಹೊರಡಿಸಿ ಅವಕಾಶ ಕಲ್ಪಿಸಲಾಗಿದೆ.

**ಸಂಖ್ಯೆ:** ಸಿಐ-ಎಂಎಂಎಸ್/352/2026

**(ಎಸ್.ಎಸ್. ಮಲ್ಲಿಕಾರ್ಜುನ)**
ಗಣಿ ಮತ್ತು ಭೂವಿಜ್ಞಾನ ಹಾಗೂ
ತೋಟಗಾರಿಕೆ ಸಚಿವರು